## ಬಾಹುಬಲಿ ಎತ್ತರದ ಬಲಾಬಲ (ಅಡಿಗಳಲ್ಲಿ)

1980ರಲ್ಲಿ ಕರ್ನಾಟಕ ವಿ.ವಿ.ಯ ಭಾರತೀಯ ಕಲಾ ಇತಿಹಾಸ ಸಂಸ್ಥೆ ಥಿಯೋಡಲೈಟ್ ಉಪಕರಣದಿಂದ ಅಳೆದಾಗ ದೊರೆತ ವಿವರ..

| | |
|---|---|
| ಒಟ್ಟು ಎತ್ತರ | 58.8 |
| ಪಾದ | 2.8 |
| ಪಾದದಿಂದ ಮೊಣಕಾಲು | 15.2 |
| ಪಾದದಿಂದ ಟೊಂಕ | 31.4 |
| ಪಾದದಿಂದ ಹೊಕ್ಕಳು | 34.1 |
| ಪಾದದಿಂದ ಕತ್ತಿನ ರೇಖೆ | 45.10 |
| ಪಾದದಿಂದ ಕತ್ತು | 47.8 |
| ಮೊಣಕಾಲಿನಿಂದ ಟೊಂಕ | 16.2 |
| ಟೊಂಕದಿಂದ ಹೊಕ್ಕಳು | 2.9 |
| ಹೊಕ್ಕಳಿಂದ ಕತ್ತಿನ ರೇಖೆ | 10.11 |
| ಕತ್ತಿನ ರೇಖೆಯಿಂದ ಕತ್ತಿನ ಎತ್ತರ | 2.8 |
| ಕತ್ತಿನ ಮೇಲ್ಭಾಗದಿಂದ ನೆತ್ತಿ | 11 |
| ಬಾಹುಗಳ ಉದ್ದ | 30 |
| ಶಿಶ್ನದ ಉದ್ದ | 4 |
| ಕಿವಿಯ ಉದ್ದ | 5.10 |
| ನಾಸಿಕದ ಉದ್ದ | 3.9 |
| ಮಧ್ಯ ಬೆರಳು | 8 |
| ತೋರು ಬೆರಳು | 7 |
| ಹೆಬ್ಬೆರಳು | 5 |
| ಅಗಲ–ಕಿವಿಯಿಂದ ಕಿವಿಗೆ | 8.10 |
| ಟೊಂಕ | 9.1 |
| ಭುಜ | 23.9 |
| ಎದೆ | 12.8 |
| ಕತ್ತು | 6.1 |



## ಮಹಾನ್ ಸಾಧುಗಳು, ಮಾತಾಜಿಗಳು

ದೇಶದ ನಾನಾ ಭಾಗಗಳಿಂದ ತಂಡೋಪತಂಡವಾಗಿ 3 ತಿಂಗಳ ಹಿಂದೆಯೇ ಆಗಮಿಸಿರುವ ಆಚಾರ್ಯರು, ತ್ಯಾಗಿಗಳು, ಮಾತಾಜಿಗಳು ತ್ಯಾಗಿ ನಗರದಲ್ಲಿ ವಾಸ್ತವ್ಯ ಹೂಡಿದ್ದಾರೆ. ಸನ್ಯಾಸತ್ವ ದೀಕ್ಷೆ ಪಡೆದಿರುವ ಬ್ರಹ್ಮಚಾರಿಣಿಯರಿಗಾಗಿ ಶೌಚಗೃಹ ಸಹಿತ ಶೆಡ್ ನಿರ್ಮಿಸಲಾಗಿದೆ. ಮಾತಾಜಿಗಳಿಗೆ ನಿರ್ಮಾಣ ಮಾಡಿರುವ ಶೆಡ್ಗಳಲ್ಲಿ ಪ್ರತ್ಯೇಕ ಶೌಚಗೃಹಗಳಿವೆ. 500 ಮುನಿಗಳು, ಅವರ ಹಿಂಬಾಲಕರು, ಸೇವಕರು ಸೇರಿ ಒಟ್ಟು 2 ಸಾವಿರ ಜನರು ಈ ನಗರದಲ್ಲಿ ಆಶ್ರಯ ಪಡೆದಿದ್ದಾರೆ.

ಪ್ರತಿ ನಗರಗಳಲ್ಲೂ ಭೋಜನಾ ಶಾಲೆ, ಮಾಹಿತಿ ಕೇಂದ್ರ, ಆರೋಗ್ಯ ಕೇಂದ್ರ, ಪೊಲೀಸ್ ಚೌಕಿ, ಅಗ್ನಿಶಾಮಕ ವಾಹನ ವ್ಯವಸ್ಥೆ ಮಾಡಲಾಗಿದೆ.



## ಇದು ನಾಲ್ಕನೇ ಮಹಾಮಸ್ತಕಾಭಿಷೇಕ

ಇಪ್ಪತ್ತೊಂದನೇ ಶತಮಾನದ ದ್ವಿತೀಯ ಮಹಾಮಜ್ಜನವನ್ನು ಅತ್ಯಂತ ಸ್ಮರಣೀಯವಾಗಿಸಲು ಶ್ರವಣಬೆಳಗೊಳದ ದಿಗಂಬರ ಜೈನ ಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಪಣತೊಟ್ಟಿದ್ದಾರೆ. 1981, 1993, 2006ರಲ್ಲಿ ಮಹಾಮಸ್ತಕಾಭಿಷೇಕಗಳ ನೇತೃತ್ವ ವಹಿಸಿದ್ದ ಶ್ರೀಗಳು ಈ ಬಾರಿಯ ಮಹೋತ್ಸವವನ್ನು ಐತಿಹಾಸಿಕ ವಿದ್ಯಮಾನವನ್ನಾಗಿಸಲು ಸಿದ್ಧತೆ ನಡೆಸುತ್ತಿದ್ದಾರೆ. ಸಂಸದ ಎಚ್.ಡಿ.ದೇವೇಗೌಡ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಮಂಜು ಅವರು ಮಹೋತ್ಸವದ ಬಗ್ಗೆ ವಿಶೇಷ ಕಾಳಜಿ ವಹಿಸಿದ್ದಾರೆ. ಮಹೋತ್ಸವದ ವಿಶೇಷಾಧಿಕಾರಿ ಬಿ.ಎನ್.ವರಪ್ರಸಾದ್ ರೆಡ್ಡಿ, ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅಭಿವೃದ್ಧಿ ಕಾರ್ಯಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.

ಮೂರ್ತಿಯ ದೃಶ್ಯವೈಭವ 360 ಡಿಗ್ರಿ ಕೋನದಲ್ಲಿ ವರ್ಚ್ಯುವಲ್ ರಿಯಾಲಿಟಿ ಮಾದರಿಯಲ್ಲಿ ನೇರ ಪ್ರಸಾರವಾಗಲಿದ್ದು, ಬಾಹುಬಲಿಯ ಮುಡಿಯಿಂದ ಅಡಿಯವರೆಗೂ ವಿವಿಧ ದ್ರವ್ಯಗಳಲ್ಲಿ ನಡೆಯಲಿರುವ ಪವಿತ್ರ ಸ್ನಾನವನ್ನು ಎದುರಿನಲ್ಲೇ ನಿಂತು ನೋಡುತ್ತಿರುವ ಅನುಭವ ವೀಕ್ಷಕರಿಗೆ ಆಗಲಿದೆ.

**ಜಲ ಸಾಹಸ ಕ್ರೀಡೆ:** ಚನ್ನರಾಯಪಟ್ಟಣದಿಂದ ಬೆಳಗೊಳಕ್ಕೆ ಸಾಗುವ ಮಾರ್ಗದಲ್ಲಿರುವ ಜನಿವಾರ ಕೆರೆಯಲ್ಲಿ ಜಲಸಾಹಸ ಚಟುವಟಿಕೆಗಳು ಈ ಬಾರಿಯ ಮಹೋತ್ಸವದ ಮತ್ತೊಂದು ವೈಶಿಷ್ಟ್ಯ. ಹೇಮಾವತಿ ನದಿ ಸಂಪರ್ಕ ಇರುವುದರಿಂದ ವರ್ಷ ಪೂರ್ತಿ ಕೆರೆಯಲ್ಲಿ ನೀರು ಲಭ್ಯವಿರುತ್ತದೆ. ದೋಣಿ ವಿಹಾರ, ಬನಾನಾ ಬೋಟ್ ರೈಡ್, ಪವರ್ ಬೋಟ್ ರೈಡ್, ಜೆಟ್ ಕೀ, ಪೆಡ್ಲಿಂಗ್ ಬೋಟ್, ಪ್ಲೇನ್ ವಾಟರ್ ರಾಫ್ಟಿಂಗ್ ಇದೆ.

**ಬೆಟ್ಟಕ್ಕೆ ಹೊಸ ಮೆಟ್ಟಿಲು:** ವಿಂಧ್ಯಗಿರಿ ಬೆಟ್ಟಕ್ಕೆ ಭಕ್ತರು ಹೋಗಿ ಬರಲು ಅನುಕೂಲವಾಗುವಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾಲಯ ರೂ.42 ಲಕ್ಷ ವೆಚ್ಚದಲ್ಲಿ 489 ನೂತನ ಮೆಟ್ಟಿಲು ನಿರ್ಮಿಸಿದೆ. ಮೊದಲನೇ ಸಾಲಿನ ಮೆಟ್ಟಿಲುಗಳನ್ನು ವಿಂಧ್ಯಗಿರಿಯ ಉತ್ತರ ಭಾಗದಲ್ಲಿ ಕ್ರಿ.ಶ. 1910ರ ಮೊದಲನೇ ಮಹಾಮಸ್ತಕಾಭಿಷೇಕದ ವೇಳೆ ಕೆತ್ತಲಾಗಿದೆ. ಎರಡನೇ ಸಾಲಿನ ಮೆಟ್ಟಿಲುಗಳನ್ನು ಕ್ರಿ.ಶ. 1967ರ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಪಶ್ಚಿಮ ಭಾಗದಲ್ಲಿ ಕೆತ್ತಲಾಗಿದೆ. ಈ ಮೆಟ್ಟಿಲುಗಳನ್ನು 12 ವರ್ಷಕ್ಕೊಮ್ಮೆ ನಡೆಯುವ ಮಹೋತ್ಸವದ ಸಂದರ್ಭದಲ್ಲಿ ಬಳಸಲಾಗುತ್ತದೆ. ಮೂರನೇ ಸಾಲಿನ ಮೆಟ್ಟಿಲುಗಳನ್ನು ಕ್ರಿ.ಶ.1981ರ ಸಹಸ್ರಾಬ್ಧಿ ಮಹಾಮಸ್ತಕಾಭಿಷೇಕದ ವೇಳೆ ನಿರ್ಮಿಸಲಾಗಿದೆ.